"ಮಧುರ ಮಕ್ಕಳೇ - ಒಬ್ಬ ಈಶ್ವರನ ಜೊತೆ ಸತ್ಯ ಪ್ರೀತಿಯನ್ನು ಇಡಬೇಕು, ಈ ಇಂದ್ರನ ಸಭೆಗೆ ಸುಪುತ್ರ ಮಕ್ಕಳನ್ನೇ ಕರೆದುಕೊಂಡು ಬರಬೇಕು, ಕುಪುತ್ರರನ್ನು ಕರೆದುಕೊಂಡು ಬರಬಾರದು"

ಪ್ರಶ್ನೆ: 21 ಜನ್ಮಗಳಿಗೆ ಶ್ರೇಷ್ಠಾತಿ ಶ್ರೇಷ್ಠ ಲಾಟರಿಯನ್ನು ತೆಗೆದುಕೊಳ್ಳಲು ಎಂತಹ ಪುರುಷಾರ್ಥವನ್ನು ಮಾಡುತ್ತಾ ಹೋಗಬೇಕು?

ಉತ್ತರ: ಒಬ್ಬ ಪಾರಲೌಕಿಕ ಪ್ರಿಯತಮನನ್ನು ನೆನಪು ಮಾಡುವ ಹಾಗು ಅವರ ಶ್ರೀಮತದಂತೆ ನಡೆಯುವಂತಹ ಪೂರ್ಣ ಪುರುಷಾರ್ಥ ಮಾಡಬೇಕು. ಒಂದುವೇಳೆ ಯಾರ ನಾಮ ರೂಪದಲ್ಲಿ ಏನಾದರು ಬುದ್ಧಿ ಬಂಧಿಸಿದ್ದರೆ ಅಲ್ಲಿಂದ ಬುದ್ಧಿಯೋಗವನ್ನು ತೆಗೆಯಬೇಕು. ರಾತ್ರಿಯ ವೇಳೆ ಸಮಯ ಸಿಕ್ಕಾಗ ಪ್ರೀತಿಯಿಂದ ತಂದೆಯನ್ನು ನೆನಪು ಮಾಡಿ, ದೈವೀ ಗುಣಗಳನ್ನು ಧಾರಣೆ ಮಾಡಿದಾಗ 21 ಜನ್ಮಗಳಿಗೆ ಲಾಟರಿ ಸಿಗುತ್ತದೆ.

ಗೀತೆ: ಅವರೆಂದು ನಮ್ಮಿಂದ ಬೇರೆ ಆಗುವುದಿಲ್ಲ.................

ಓಂ ಶಾಂತಿ. ದುಃಖ ಇಲ್ಲಿಯೇ ಇರುವುದು. ತಂದೆ ಬರುವುದೇ ಮಕ್ಕಳನ್ನು ದುಃಖದಿಂದ ಬಿಡಿಸುವ ಸಲುವಾಗಿ. ಏಕೆಂದರೆ ದುಃಖದಿಂದ ಬಿಡಿಸಲು ಕೃಷ್ಣ ಇಲ್ಲಿಗೆ ಬರುವುದಿಲ್ಲವೆಂದು ಮಕ್ಕಳಿಗೆ ತಿಳಿಸಿಕೊಟ್ಟಿದ್ದಾರೆ. ಕೃಷ್ಣ ಪುರಿಯಲ್ಲಿ ದುಃಖ ಇರುವುದಿಲ್ಲ. ಕಂಸ ಪುರಿಯಲ್ಲಿ ದುಃಖ ಇರುತ್ತದೆ. ಕೃಷ್ಣ ಪುರಿ ಶ್ರೇಷ್ಠಾಚಾರಿ ದೇವತೆಗಳ ಪುರಿಯಾಗಿದೆ. ನಾವೀಗ ದೈವೀ ಗುಣಗಳನ್ನು ಧಾರಣೆ ಮಾಡುವಂತಹವರಾಗಿದ್ದೇವೆ. ಒಂದುವೇಳೆ ಅಸುರೀ ಗುಣಗಳನ್ನು ಬಿಡದೆ ಇದ್ದರೆ ದೈವೀ ಸಂಪ್ರದಾಯದಲ್ಲಿ ಉತ್ತಮ ಪದವಿ ಸಿಗುವುದಿಲ್ಲ. ಈಗ ಪದವಿಯನ್ನು ಕಳೆದುಕೊಂಡರೆ ಕಲ್ಪ-ಕಲ್ಪಾಂತರ ಕಳೆದುಕೊಂಡಂತೆ. ಆಗ ತುಂಬಾ ನಷ್ಟ ಮಾಡಿಕೊಳ್ಳುತ್ತೀರಿ. ಇಲ್ಲಿಯ ಲಾಭ ನಷ್ಟವು ಒಂದು ಜನ್ಮಕ್ಕೋಸ್ಕರ ಇದೆ. ಇದಂತೂ ಜನ್ಮ-ಜನ್ಮಾಂತರದ ಮಾತಾಗಿದೆ. ಉತ್ತಮ ಕನಿಷ್ಟ ಕರ್ಮವಂತೂ ಆಗುತ್ತಿರುತ್ತದೆಯಲ್ಲವೇ. ಸತ್ಯಯುಗದಲ್ಲಿ ಕೇವಲ ಉತ್ತಮ ಕರ್ಮ ಇರುತ್ತದೆ. ಕನಿಷ್ಟ ಕರ್ಮ ಮಾಡಿಸುವಂತಹ ರಾವಣ ಅಲ್ಲಿ ಇರುವುದಿಲ್ಲ. ಈಗ ನಾವಿಲ್ಲಿ ಎಂತಹ ಕರ್ಮ ಮಾಡುತ್ತೇವೆ, ಇಪ್ಪತ್ತೊಂದು ಜನ್ಮಗಳಿಗಾಗಿ ಆ ಕರ್ಮದ ಫಲವನ್ನು ಪಡೆದುಕೊಳ್ಳಬೇಕಾಗುತ್ತದೆ. ಶ್ರೀಮತದಂತೆ ನಡೆಯುತ್ತಿರಿ ಇಲ್ಲವೆಂದರೆ ಅಸುರಿ ಮತದಂತೆ ನಡೆಯುತ್ತೀರಿ. ಕನಿಷ್ಟ ಕರ್ಮ ಮಾಡಿದ್ದೇವೆಂದರೆ ಅಸುರೀ ಮತದಂತೆ ನಡೆಯುತ್ತಿದ್ದೀರೆಂದರ್ಥ. ತಕ್ಷಣ ತಿಳಿದು ಬಿಡುತ್ತದೆ. ತಂದೆಯ ಜೊತೆ ಸಂಪೂರ್ಣ ಪ್ರೀತಿ ಇರಬೇಕಲ್ಲವೆ. ಈಶ್ವರನ ಜೊತೆ ಪ್ರೀತಿ ಇಲ್ಲವೆಂದರೆ ಅಸುರರೊಂದಿಗೆ ಪ್ರೀತಿ ಇರುತ್ತದೆ. ನಿಮಗೀಗ ಇಲ್ಲಿ ಈಶ್ವರನ ಪ್ರೀತಿ ಸಿಗುತ್ತಿದೆ. ಈಶ್ವರ ತಂದೆ ಎಂದು ಹೇಳುತ್ತೀರಿ. ನಾವು ನಿಮ್ಮೊಬ್ಬರೊಂದಿಗೆ ಪ್ರೀತಿ ಇಡುತ್ತೇವೆಂದು ಪ್ರತಿಜ್ಞೆ ಮಾಡುತ್ತೀರಿ. ನಂತರ ಯಾರೊಂದಿಗಾದರು ಪ್ರೀತಿ ಇಟ್ಟರೆ ಅಸುರರ ಜೊತೆ ಪ್ರೀತಿಯನ್ನು ಮಾಡುತ್ತೀರೆಂದರ್ಥ, ನಂತರ ಸ್ವಯಂ ಅಸುರರಾಗಿ ಬಿಡುತ್ತೀರಿ. ಒಂದು ಕಥೆಯನ್ನು ಹೇಳುತ್ತೀರಲ್ಲವೇಕ - ಇಂದ್ರ ಸಭೆ ನಡೆಯುತ್ತಿತ್ತು, ಆಗ ಒಂದು ಪರಿ (ದೇವತೆ) ವಿಕಾರಿಯನ್ನು ಆ ಸಭೆಗೆ ಕರೆದುಕೊಂಡು ಹೋಯಿತು, ಅವರ ಸುಪುತ್ರರಾಗದೆ ಕುಪುತ್ರ ವಿಕಾರಿ ಆಗಿದ್ದರು ಆಗ ಇಬ್ಬರನ್ನು ಕೆಳಗೆ (ಭೂ ಲೋಕ) ಎಸೆದು ಬಿಟ್ಟರು. ಜ್ಞಾನ ಧಾರಣೆ ಇಲ್ಲದ ಕಾರಣ ಇಂತಹವರನ್ನು ಕರೆದುಕೊಂಡು ಬರುತ್ತಾರೆ, ಅಪವಿತ್ರವಾಗಿರುವವರನ್ನು ಕರೆದುಕೊಂಡು ಬರುವಂತಹ ಬ್ರಹ್ಮಾಕುಮಾರ-ಕುಮಾರಿಯರೂ ಸಹ ಶ್ರಾಪಿತರಾಗುತ್ತಾರೆ. ವಿಕಾರಿಯಂತು ಶಾಪಕ್ಕೆ ಗುರಿ ಆಗಿಯೇ ಇರುತ್ತಾರೆ. ಇದು ಈಶ್ವರನ ಜ್ಞಾನ ಇಂದ್ರ ಸಭೆಯಾಗಿದೆ. ಜ್ಞಾನ ಮಳೆಯನ್ನು ಸುರಿಸುವಂತಹವರು ಒಬ್ಬರೇ ತಂದೆಯಾಗಿದ್ದಾರೆ. ತುಂಬಾ ತಿಳಿದುಕೊಂಡ ಮೇಲೆ ಯಾರನ್ನಾದರು ಕರೆದುಕೊಂಡು ಬರಬೇಕು. ಇಲ್ಲವೆಂದರೆ ಕರೆದುಕೊಂಡು ಬರುವವರೂ ಸಹ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ನೀವು ಆತ್ಮಿಕ ಮಾರ್ಗದರ್ಶಕರಾಗಿದ್ದೀರಿ. ನೀವು ಸರ್ವ ಶ್ರೇಷ್ಠ ತಂದೆಯ ಬಳಿ ತುಂಬಾ ಎಚ್ಚರಿಕೆಯಿಂದ ಕರೆದುಕೊಂಡು ಬರಬೇಕಾಗುತ್ತದೆ. ಈಗಂತೂ ಅನೇಕರು ಮಿಲನ ಮಾಡಲು ಬರುತ್ತಾರೆ. ಕೆಲವರೊಂದಿಗೆ ಮಿಲನ ಮಾಡಬೇಕಾಗುತ್ತದೆ. ಆದರೆ ಅಂತಹ ದಿನವೂ ಸಹ ಬರುತ್ತದೆ ಎಷ್ಟೇ ಗಣ್ಯ ವ್ಯಕ್ತಿ ಆದರೂ ಪವಿತ್ರರಾಗಿರದ ಕಾರಣ ತಂದೆಯ ಸನ್ಮುಖದಲ್ಲಿ ಬರಲಾರರು. ಈಗಲೇ ಕಡ್ಡಾಯ ಮಾಡಿದರೆ ಕಷ್ಟವಾಗಿ ಬಿಡುತ್ತದೆ. ಏಕೆಂದರೆ ಗುರಿ ತುಂಬಾ ಶ್ರೇಷ್ಠವಾಗಿದೆ, ಪ್ರಪಂಚದಲ್ಲಿ ಎಷ್ಟೊಂದು ಆಶ್ರಮ ಅಥವಾ ಸತ್ಸಂಗಗಳಿವೆ, ಆದರೆ ಎಲ್ಲಿಯೂ ಗುರಿ ಉದ್ದೇಶವಾಗಲಿ ಇರುವುದಿಲ್ಲ. ಇದರಿಂದ ಲಾಭ ಏನೆಂಬುದನ್ನು ತಿಳಿದುಕೊಂಡಿರುವುದಿಲ್ಲ. ಇಲ್ಲಿ ದಪ್ಪವಾದ ಅಕ್ಷರಗಳಲ್ಲಿ ಗುರಿ-ಉದ್ದೇಶವನ್ನು ಬರೆಯಲಾಗುತ್ತದೆ. ಮನುಷ್ಯರಿಂದ ದೇವತೆಗಳಾಗಬೇಕು. ಸಿಖ್ ಜನರು ಈ ರೀತಿ ಗಾಯನ ಮಾಡುತ್ತಾರೆ-ಮನುಷ್ಯರಿಂದ ದೇವತೆಗಳನ್ನಾಗಿ ಮಾಡಲಾಯಿತು....... ದೇವತೆಗಳು ಸತ್ಯಯುಗದಲ್ಲಿರುತ್ತಾರೆ. ಮನುಷ್ಯರಿಂದ ದೇವತೆಗಳನ್ನಾಗಿ ಮಾಡುವಂತಹವರು ಸ್ವಯಂ ಭಗವಂತನೇ ಆಗಿರಬೇಕು. ಭಗವಂತ ಏನು ಮಾಡುತ್ತಾರೆ? ಭಗವಾನ್ ಹಾಗೂ ಭಗವತಿ. ಅದರೆ ನಾವು ದೇವೀ-ದೇವತೆಗಳೆಂದು ಹೇಳುತ್ತೇವೆ ಏಕೆಂದರೆ ಭಗವಂತ ಒಬ್ಬರೇ ಆಗಿದ್ದಾರೆ. ಬ್ರಹ್ಮಾ-ವಿಷ್ಣು-ಶಂಕರ ಸೂಕ್ಷ್ಮವತನವಾಸಿ ಆಗಿದ್ದಾರೆ. ಲಕ್ಷ್ಮೀ-ನಾರಾಯಣರೂ ಸಹ ದೈವೀ ಗುಣವುಳ್ಳ ಮನುಷ್ಯರಾಗಿದ್ದಾರೆ. ದೈವೀ ಗುಣವುಳ್ಳವರೇ ಅವಶ್ಯವಾಗಿ ಅಸುರಿ ಗುಣದಲ್ಲಿ ಬರುತ್ತಾರೆ. ಈಗ ಬ್ರಹ್ಮಣ ಮೂಲಕ ಸ್ಥಾಪನೆಯಾಗುತ್ತಿದೆ. ನಾನು ಪತಿತ ಪ್ರಪಂಚದಲ್ಲಿ ಪತಿತ

ಶರೀರದಲ್ಲಿ ಬರುತ್ತೇನೆಂದು ತಂದೆ ತಿಳಿಸುತ್ತಾರೆ. ಇವರು ತಮ್ಮ ರಾಜ್ಯ ಸಹಿತ ಪೂರ್ತಿ 84 ಜನ್ಮಗಳನ್ನು ಪಡೆಯುತ್ತಾರೆ. ಪತಿತರನ್ನು ಪಾವನ ಮಾಡುವಂತಹವರು ಅವರು ಒಬ್ಬರೇ ಆಗಿದ್ದಾರೆ, ಕೃಷ್ಣ ಪತಿತರನ್ನು ಪಾವನ ಹೇಗೆ ಮಾಡುತ್ತಾನೆ. ಕೃಷ್ಣನು ಆ ಹೆಸರು ಹಾಗೂ ರೂಪದಲ್ಲಿ ಒಮ್ಮೆಯೇ ಬರುತ್ತಾನೆ. ಕೃಷ್ಣನಿಗೆ ಅದೇ ನಾಮ ರೂಪವುಳ್ಳ ಚಿತ್ರ ಐದು ಸಾವಿರ ವರ್ಷದ ನಂತರ ಸಿಗುತ್ತದೆ. ಉಳಿದ ಜನ್ಮಗಳೆಲ್ಲವು ಬೇರೆ-ಬೇರೆ ಆಗಿರುತ್ತದೆ. ಇದೇ ಲಕ್ಷ್ಮೀ-ನಾರಾಯಣರು ಜಗದಂಬಾ, ಜಗತ್-ಪಿತ ಆಗಿದ್ದಾರೆ, ಈಗ ಅವರಿಗೆ ಮುಂದಿನ ಜನ್ಮದಲ್ಲಿ ನಾವು ಏನಾಗುತ್ತೇವೆಂದು ತಿಳಿದಿದೆ. ಈಗ ಇರುವ ಮುಖ ಲಕ್ಷಣವು ಪರಿವರ್ತನೆ ಆಗುತ್ತದೆ. ಈಗ ನೀವು ವತನದಲ್ಲಿ ಹೋಗಿ ನೋಡಬಹುದು. ಸತ್ಯಯುಗದಲ್ಲಿ ಲಕ್ಷ್ಮೀ- ನಾರಾಯಣರ ಮುಖ ಲಕ್ಷಣ ಹೇಗೆ ಇರುತ್ತದೆ. ನೀವು ಈ ಸಮಯದಲ್ಲಿ ಸಾಕ್ಷಾತ್ಕಾರ ಮಾಡಬಹುದು. ಕೆಲವರಿಗೆ ಸಾಕ್ಷಾತ್ಕಾರ ಆಗುವುದಿಲ್ಲ. ಇದು ಆಶ್ಚರ್ಯದ ಮಾತಾಗಿದೆ. ನೀವು ಇವರೊಬ್ಬರನ್ನು ಯಥಾರ್ಥವಾಗಿ ನೋಡಬಹುದು ಆದರೆ ಆ ಫೋಟೋ ಇಲ್ಲಿ ಮಾಡಲಾಗುವುದಿಲ್ಲ. ಈ ಎಲ್ಲಾ ಫೋಟೋಗಳನ್ನು ಇಲ್ಲಿಯೇ ಮಾಡಲಾಗಿದೆ. ನಾವು ಭವಿಷ್ಯದಲ್ಲಿ ಈ ರೀತಿ ಆಗುತ್ತೇವೆಂದು ತಿಳಿದುಕೊಂಡಿದ್ದೇವೆ. ಗುರುನಾನಕ್ ರವರ ಅದೇ ಚಿತ್ರ ಮತ್ತೆ ಐದು ಸಾವಿರ ವರ್ಷದನಂತರ ಆಗುತ್ತದೆ. ಈ ಮಾತುಗಳನ್ನು ನೀವೇ ತಿಳಿದುಕೊಂಡಿದ್ದೀರಿ. ಇಂತಹ ತಂದೆಯ ಜೊತೆ ಸಂಬಂಧ ನಿರಂತರ ಹಾಗು ಅವ್ಯಭಿಚಾರಿ ಆಗಿರಬೇಕು. ಯಾವ ದೇಹಧಾರಿಯ ನಾಮ ರೂಪದಲ್ಲಿ ಪ್ರೀತಿಯಾದರೆ ವ್ಯಭಿಚಾರಿ ಆಗಿ ಬಿಡುತ್ತೀರಿ. ಶಿವ ತಂದೆಯ ಪೂಜೆ ಆರಂಭದಿಂದ ಮಾಡುತ್ತಾರೆ. ಅದನ್ನು ಅವ್ಯಭಿಚಾರೀ ಭಕ್ತಿಯೆಂದು ಕರೆಯಲಾಗುತ್ತದೆ. ಶಿವನನ್ನೇ ಪೂಜಿಸುತ್ತಾರೆ. ಈಗ ಮಕ್ಕಳೂ ಸಹ ಒಬ್ಬ ಶಿವ ತಂದೆಯ ನೆನಪಲ್ಲಿರಬೇಕಾಗಿದೆ. ತಂದೆ ತಿಳಿಸುತ್ತಾರೆ - ಅಂತ್ಯದಲ್ಲಿ ನಿಮ್ಮ ಬುದ್ಧಿಯೋಗ ವ್ಯಭಿಚಾರಿಯಾಗಬಾರದು. ಎಲ್ಲಿಯಾದರು ನಾಮ ರೂಪದಲ್ಲಿ ಬಂಧಿಸಕೊಂಡಿದ್ದರೆ ಬುದ್ಧಿಯನ್ನು ಬಿಡಿಸಿಕೊಳ್ಳಬೇಕು. ಮಾಯೆಯು ಅಲ್ಲಿ ಒಮ್ಮೆ ಇಲ್ಲಿ ಒಮ್ಮೆ ಬುದ್ಧಿ ಚಂಚಲವಾಗುವಂತೆ ಮಾಡುತ್ತಿರುತ್ತದೆ. ಆಗಾಗ ಮಿತ್ರ ಸಂಬಂಧಿಗಳ ನೆನಪು ಬರುತ್ತಿರುತ್ತದೆ, ತಕ್ಷಣ ಯೋಗ ಏಕರಸವಾಗುವುದು ಕಷ್ಟದ ಮಾತಾಗಿದೆ. ತಂದೆ ತಿಳಿಸುತ್ತಾರೆ-ಈಗ ಇನ್ನೂ ಯಾರು ಪರಿಪೂರ್ಣ ಆಗಿಲ್ಲ. ಇದು ಅತೀ ಶ್ರೇಷ್ಠವಾದ 21 ಜನ್ಮಗಳ ಲಾಟರಿ ಆಗಿದೆ. ಅದಕ್ಕಾಗಿ ಉತ್ತಮವಾದ ಪುರುಷಾರ್ಥ ಮಾಡಬೇಕಾಗಿದೆ. ಮಾಯೆ ತುಂಬಾ ಶಕ್ತಿಶಾಲಿ ಆಗಿದೆ, ತಕ್ಷಣ ನೆನಪನ್ನು ಮರೆಯುವಂತೆ ಮಾಡಿ ಬಿಡುತ್ತದೆ. ಇದೂ ಸಹ ನಾಟಕದಲ್ಲಿ ನಿಗಧಿ ಆಗಿರುವ ಕಾರಣ ರಾತ್ರಿಯ ವೇಳೆ ನೆನಪಿನಲ್ಲಿರುವಂತಹ ಪುರುಷಾರ್ಥ ಮಾಡಬೇಕು. ಹಗಲಿನಲ್ಲಿ ಸಮಯ ಸಿಗುವುದಿಲ್ಲ. ರಾತ್ರಿಯಲ್ಲಿ ಪಾರಲೌಕಿಕ ಪ್ರಿಯತಮನನ್ನು ನೆನಪು ಮಾಡಿ. ಶ್ರೀಮತದಂತೆ ನಡೆದಾಗ ಶ್ರೇಷ್ಠರಾಗುತ್ತೀರಿ. ಶ್ರೇಷ್ಠಾಚಾರಿ ಆಗಿರುವ ಕೃಷ್ಣನನ್ನು ಗೀತೆಯ ಭಗವಂತನೆಂದು ಹೇಳಿ ಬಿಟ್ಟಿದ್ದಾರೆ ಹಾಗೂ ಶ್ರೇಷ್ಠರನ್ನಾಗಿ ಮಾಡುವಂತಹ ಭಗವಂತನನ್ನು ಬಚ್ಚಿಟ್ಟು ಬಿಟ್ಟಿದ್ದಾರೆ. ಕೃಷ್ಣ ಹಾಗೂ ಪರಮಪಿತ ಪರಮಾತ್ಮನ ಗುಣಗಳನ್ನು ಅಗತ್ಯವಾಗಿ ವರ್ಣನೆ ಮಾಡಬೇಕು ಆಗ ಸರ್ವವ್ಯಾಪಿಯ ಮಾತು ಹೊರಟು ಹೋಗುತ್ತದೆ. ಇದು ಸಂಗಮಯುಗ ಇದನ್ನು ಪುರುಷೋತ್ತಮ ಕಲ್ಯಾಣಕಾರಿ ಯುಗವೆಂದು ಕರೆಯಲಾಗುತ್ತದೆ. ಸತ್ಯಯುಗ ಹಾಗು ಕಲಿಯುಗವನ್ನು ಪುರುಷೋತ್ತಮ ಯುಗವೆಂದು ಕರೆಯುವುದಿಲ್ಲ. ಪುರುಷೋತ್ತಮವೆಂದು ಕಲ್ಯಾಣಕಾರಿಯುಗಕ್ಕೆ ಕರೆಯಲಾಗುತ್ತದೆ. ಸತ್ಯಯುಗ ಕಲ್ಯಾಣಕಾರಿ ಆಗಿಯೇ ಇದೆ, ಆ ಯುಗದ ಮೊದಲು ಅಕಲ್ಯಾಣಕಾರಿ ಯುಗವಿತ್ತು. ಈ ಮಹಿಮೆ ಎಲ್ಲವು ಸಂಗಮಯುಗದ ಮಹಿಮೆ ಆಗಿದೆ. ಏಕೆಂದರೆ ಈ ಯುಗದಲ್ಲಿಯೇ ಶಿವ ತಂದೆಯ ಅವತರಣೆ ಆಗುತ್ತದೆ. ತಂದೆ ತಿಳಿಸುತ್ತಾರೆ-ನಾನು ಕಲ್ಪದ ಸಂಗಮಯುಗದಲ್ಲಿ ಬರುತ್ತೇನೆ. ಕಲ್ಪ ಪೂರ್ತಿಯಾಗಿ ಹೊಸ ಕಲ್ಪವು ಆರಂಭವಾಗುತ್ತದೆ. ಹಳೆಯ ಕಲ್ಪದಲ್ಲಿ ಕಲಿಯುಗ ಹಾಗು ಹೊಸ ಕಲ್ಪದಲ್ಲಿ ಸತ್ಯಯುಗ. ಇದು ಕಲ್ಪದ ಸಂಗಮಯುಗವಾಗಿದೆ. ಅವರು ಇದನ್ನು ಯುಗೇ-ಯುಗೇ ಎಂದು ಹೇಳಿ ಬಿಟ್ಟಿದ್ದಾರೆ. ಒಳ್ಳೆಯದು ಸತ್ಯಯುಗ ಹಾಗು ತ್ರೇತಾಯುಗದ ಸಂಗಮ, ತ್ರೇತಾ ಹಾಗೂ ದ್ವಾಪರ ಯುಗದ ಸಂಗಮ, ದ್ವಾಪರ ಹಾಗೂ ಕಲಿಯುಗದ ಸಂಗಮ.... ಪುನಃ ಕಲಿಯುಗ ಹಾಗೂ ಸತ್ಯಯುಗದ ಸಂಗಮ. ಈ ರೀತಿ ನಾಲ್ಕು ಸಂಗಮಗಳಾಗಿವೆ. ಆಗ ನಾಲ್ಕು ಅವತಾರವಷ್ಟೆ ಇರಬೇಕಾಗುತ್ತದೆ! ಹಾಗಾದರೆ 24 ಅವತಾರವೆಂದು ಏಕೆ ಹೇಳುತ್ತೀರಿ? ಈ ಎಲ್ಲಾ ಮಾತುಗಳು ಧಾರಣೆ ಮಾಡುವಂತಹವುಗಳಾಗಿವೆ.

ಪರಮಪಿತ ಪರಮಾತ್ಮನೊಂದಿಗೆ ನಿಮ್ಮ ಸಂಬಂಧವೇನು? ಎಂದು ತಂದೆಯೂ ತುಂಬಾ ಸಹಜ ರೀತಿಯಲ್ಲಿ ಬರೆಸಿದ್ದಾರೆ. ಪರಮಪಿತ ಎಂದು ಹೇಳುವಾಗ ಅವಶ್ಯಕವಾಗಿ ಇಬ್ಬರು ತಂದೆಯರು ಇದ್ದಾರೆ. ಪ್ರದರ್ಶನದಲ್ಲಿ ತುಂಬಾ ತಿಳಿಸಿಕೊಡಲಾಗುತ್ತದೆ, ಆದರೆ ಅಷ್ಟೊಂದು ಯಾರೂ ತಿಳಿದುಕೊಳ್ಳುವುದಿಲ್ಲ. ಕೆಲವರಿಗೆ ನಿಶ್ಚಯವಾಗುವುದಿಲ್ಲ. ಸೇವಾಕೇಂದ್ರಕ್ಕೂ ಬರುತ್ತಾರೆ, ಮುರಳಿ ಕೇಳುತ್ತಾರೆ, ಆದರೆ ಅವರು ನಮ್ಮ ತಂದೆ ಆಗಿದ್ದಾರೆ, ಅವರಿಂದ ಆಸ್ತಿ ಪಡೆಯಬೇಕಾಗಿದೆ, ಅವರ ಶ್ರೀಮತದಂತೆ ನಡೆಯಬೇಕು-ಎಂಬ ಮಾತುಗಳು ಕುಳಿತುಕೊಳ್ಳುವುದಿಲ್ಲ. ಸಾವಿರಾರು ಜನ ಬಂದು ಇವರು ನಮ್ಮ ತಂದೆ, ಅವರ ಮತದಂತೆ ನಡೆಯಬೇಕೆಂದು ತಿಳಿಯುವವರು ಒಬ್ಬರೂ ಇಲ್ಲ. ಮೊದಲು ತಾಯಿ ತಂದೆಯ ಮುಖವನ್ನು ನೋಡಬೇಕಾಗುತ್ತದೆ. ಆದರೆ ಮಾಯೆ ಪ್ರಬಲವಿರುವ ಕಾರಣ ನಿಶ್ಚಯವಿರುವುದಿಲ್ಲ. ಈ ಪ್ರಬಲವುಳ್ಳ ಮಾಯೆಯಿಂದ ಬಿಡಿಸಬೇಕಾದರೆ ತುಂಬಾ ಪರಿಶ್ರಮವಾಗುತ್ತದೆ. ತಂದೆ ತಿಳಿಸುತ್ತಾರೆ ಸದ್ಗುರುವಿನ ನಿಂದಕರಿಗೆ ಸ್ಥಾನವಿಲ್ಲ. ಒಂದುವೇಳೆ ನಡೆತೆ ಸರಿಯಿಲ್ಲದಾಗ ಅವರಿಗೆ ಜೀವನ್ಮುಕ್ತಿ ಸಿಗುವುದಿಲ್ಲ. ಇಲ್ಲಿ ನಮ್ಮ ಲಕ್ಷ್ಯವು ಸ್ಪಷ್ಟವಾಗಿದೆ. ಅರ್ಧಕಲ್ಪ ಭಕ್ತಿ ಮಾರ್ಗ ನಡೆಯುತ್ತದೆ. ಭಕ್ತಿ ಮಾರ್ಗವು ಇಳಿಯುವ ಕಲೆಯಾಗಿದೆ. ಗುರುವಿನ ಹೆಸರನ್ನು ಸ್ತುತಿಸುವುದರಿಂದ ಜೀವನದಲ್ಲಿ ಉನ್ನತಿಯಾಗುತ್ತದೆಂದು ಗಾಯನವಿದೆ. ಆದರೆ ಯಾವ ಗುರುವಿನ ಸ್ತುತಿಯನ್ನು ಮಾಡಬೇಕು? ಸದ್ಗುರು. ನೀವು ಸದ್ಗುರುವನ್ನು ತಿಳಿದುಕೊಂಡಿದ್ದೀರಿ. ಅವರು ಶಿವ ತಂದೆ ಆಗಿದ್ದಾರೆ, ಸತ್

ಪಿತ, ಸತ್ ಶಿಕ್ಷಕ, ಸದ್ಗುರು. ಶಿವ ತಂದೆಯನ್ನು ನೆನಪು ಮಾಡುವುದರಿಂದ ಏರುವ ಕಲೆ ಆಗಿ ಬಿಡುತ್ತದೆ. ಹದಿನಾರು ಕಲೆಯವರಾಗಿ ಬಿಡುತ್ತೇವೆ. ನಂತರ ಹದಿನಾರು ಕಲೆಯಿಂದ ಇಳಿಯಬೇಕು. ಅದರೆ ಮನುಷ್ಯರು ಇದರಿಂದ (ಜನನ ಮರಣ) ಬಿಡುಗಡೆ ಆಗಲು ಇಷ್ಟ ಪಡುತ್ತಾರೆ. ಆದರೆ ಬಿಡುಗಡೆ ಆಗಲು ಸಾಧ್ಯವಿಲ್ಲ. ಏರುವ ಕಲೆ, ಇಳಿಯುವ ಕಲೆ ನಂತರ ಏರುವ ಕಲೆ, ಸತೋಪ್ರಧಾನದಿಂದ ಸತೋ, ರಜೋ, ತಮೋ, ಮತ್ತೆ ತಮೋಪ್ರಧಾನದಿಂದ ಸತೋಪ್ರಧಾನ...... ಈ ರೀತಿ ಚಕ್ರ ಸುತ್ತಬೇಕಾಗುತ್ತದೆ. ಈ ಚಕ್ರದಲ್ಲಿ ಪ್ರತಿಯೊಬ್ಬರು ಬರಬೇಕು. ನೀವು ಪೂರ್ತಿ ಚಕ್ರದಲ್ಲಿ ಬರುತ್ತೀರಿ, ಅವರು ಸ್ವಲ್ಪ ಚಕ್ರದಲ್ಲಿ ಬರುತ್ತಾರೆ. ಅವರೂ ಸಹ ಸತೋ, ರಜೋ, ತಮೋನಲ್ಲಿ ಬರುತ್ತಾರೆ. ಬಾಲ್ಯತನಕ್ಕೆ ಸತೋಪ್ರಧಾನವೆಂದು ಕರೆಯಲಾಗುತ್ತದೆ ನಂತರ ಸ್ವಲ್ಪ ದೊಡ್ಡವರಾದ ಮೇಲೆ ಸತೋ, ಯುವಕರಿಗೆ ರಜೋ, ವೃದ್ಧರಿಗೆ ತಮೋ ಎಂದು ಕರೆಯಲಾಗುತ್ತದೆ. ಪ್ರತಿಯೊಬ್ಬರಿಗೂ ಸುಖ-ದುಃಖದ ಪಾತ್ರ ನಿಗಧಿಯಾಗಿದೆ. ಈ ನಾಟಕ ತುಂಬಾ ಆಶ್ಚರ್ಯವಾಗಿದೆ, ಇದನ್ನು ಯಾರೂ ಸಹ ತಿಳಿದುಕೊಂಡಿಲ್ಲ. ರಾಯಲ್ ಮನೆಯ ಮಕ್ಕಳ ಚಲನೆ ತುಂಬಾ ಘನತೆಯಿಂದ ಕೂಡಿರುತ್ತದೆ. ಇಲ್ಲಿ ಶ್ರೀಮತದಂತೆ ನಡೆಯಬೇಕು. ಎಲ್ಲರೂ ಒಂದೇ ರೀತಿಯಲ್ಲಿ ನಡೆದುಕೊಳುವುದಿಲ್ಲ. ತಂದೆ ತಿಳಿಸುತ್ತಾರೆ - ದಾಸ-ದಾಸಿಯರು ಆಗುವುದು ನಂತರ ಮೂರನೇ ದರ್ಜೆಯ ರಾಜಾ-ರಾಣಿ ಆಗುವುದಿಕ್ಕಿಂತ ಶ್ರೀಮಂತ ಪ್ರಜೆ ಆಗುವುದು ಉತ್ತಮ. ದಾನ ಪುಣ್ಯ ಮಾಡಿ ಶ್ರೀಮಂತರಾಗಿ. ದಾಸಿ-ದಾಸಿಯೆಂಬ ಹೆಸರು ಇರುವುದಿಲ್ಲ. ಭಲೆ ದಾಸ-ದಾಸಿಯರಾಗಿ ರಾಜ್ಯದಲ್ಲಿ ಹೋಗುವುದಕ್ಕಿಂತ ಶ್ರೀಮಂತ ಪ್ರಜೆಯು ಹೆಚ್ಚು ಸುಖಿಯಾಗಿರುತ್ತಾನೆ. ದಾಸಿ-ದಾಸಿಯೆಂಬ ಪದವಿಗಿಂತ ಪ್ರಜೆ ತುಂಬಾ ಶ್ರೀಮಂತನಾಗಿರುತ್ತಾನೆ. ಇಲ್ಲಿದ್ದು ಒಂದುವೇಳೆ ಶ್ರೀಮತದಂತೆ ನಡೆಯದೇ ಇದ್ದಾಗ ದಾಸ-ದಾಸಿ ಆಗುತ್ತಾರೆ. ಇಲಿಯೇ ಇದ್ದು ಯಾವುದೇ ಕುಕರ್ಮ ಮಾಡಿದಾಗ ದಾಸಿಗೂ ದಾಸಿಯಾಗಿ ಬಿಡುತ್ತಾರೆ. ಕೆಲವು ಉತ್ತಮ ದಾಸಿಯರು ಇರುತ್ತಾರೆ. ಕೆಲವು ಗೌರವ ಇಲ್ಲದ ದಾಸಿಯರಿರುತ್ತಾರೆ. ಆದುದರಿಂದ ಉತ್ತಮ ಪುರುಷಾರ್ಥ ಮಾಡಬೇಕಾಗಿದೆ. ಬಾಬಾ ಬರೆಯುತ್ತಾರೆ-ಮಕ್ಕಳಿಗೆ ಈ ರೀತಿಯ ಸರ್ಟಿಫಿಕೆಟ್ ಕಳಿಸಿಕೊಡಿ. ಕೆಲವರು ತಮ್ಮನ್ನು ನಮಗೆ ಎಲ್ಲಾ ಗೊತ್ತಿದೆ ಎಂದು ತಿಳಿದು ಕುಳಿತು ಬಿಡುತ್ತಾರೆ ನಂತರ ಅವರನ್ನು ಸುಧಾರಣೆ ಮಾಡವವರು ಯಾರು? ತಿಳಿಸಿ ಕೊಡುವುದು ತಂದೆಯ ಕರ್ತವ್ಯವಾಗಿದೆ, ನಮ್ಮ ಗುರಿ ಉದ್ದೇಶವಂತೂ ಇದೆ. ಹೇಗೆ ಬೇಕೋ ಆ ರೀತಿ ಪುರುಷಾರ್ಥವನ್ನು ಮಾಡಿಕೊಳ್ಳಿ. ವಿಜಯ ಮಾಲೆಯಲ್ಲಿ ಬಂದು ತೋರಿಸಿ. ಅಷ್ಟರತ್ನಗಳ ಮಾಲೆ ಇದೆ, ನೂರೆಂಟರ ಮಾಲೆ ಇದೆ, ಹದಿನಾರು ಸಾವಿರದ ನೂರೆಂಟರ ಮಾಲೆಯು ಇದೆ. ನಿರ್ವಿಕಾರಿ ಪ್ರಪಂಚದ ರಾಜಾ-ರಾಣಿ ಎಲ್ಲರು ಆಗುತ್ತಾರೇನು? ತುಂಬಾ ಜನ ಕೊನೆಯಲ್ಲಿ ಬರುತ್ತಾರೆ. ಭಾರತದಲ್ಲಿ ಎಲ್ಲಕ್ಕಿಂತ ಹೆಚ್ಚು ರಾಜರಿರುತ್ತಾರೆ, ಎಷ್ಟು ಊರುಗಳಿವೆ ಅಷ್ಟು ರಾಜಾ-ರಾಣಿ ನಂತರ ಅವರಿಗೆ ಎಷ್ಟೊಂದು ರಾಜ ಕುಮಾರ-ರಾಜ ಕುಮಾರಿಯರಿರುತ್ತಾರೆ. ದೊಡ್ಡ ಪಟ್ಟಿಯನ್ನೇ ಮಾಡಬಹುದು. ಮಹಾರಾಜ, ರಾಜ ನಂತರ ಅವರ ಪರಿವಾರದವರು. ಮಾರ್ಗದರ್ಶಿಯಲ್ಲಿ ಮುಖ್ಯ ಹೆಸರುಗಳನ್ನು ಹಾಕುತ್ತಾರೆ. ಸತ್ಯಯುಗದಲ್ಲಿ ಒಂದೊಂದು ಮಗು ಇರುತ್ತದೆ. ಈ ರೀತಿ ಅತಿ ವಿಸ್ತಾರವಾದ ಲೆಕ್ಕವಿದೆ, ಆದರೂ ತಂದೆ ತಿಳಿಸುತ್ತಾರೆ-ಯಾರಿಂದ ಆಸ್ತಿ ಪಡೆಯಬೇಕು ಆ ಬೇಹದ್ದಿನ ತಂದೆಯನ್ನು ನೆನಪು ಮಾಡಿ. ಗೃಹಸ್ಥ ವ್ಯವಹಾರದಲ್ಲಿಯು ಇರಬೇಕು, ಇದಾಗಿದೆ ಪವಿತ್ರ ಪ್ರವೃತ್ತಿ ಮಾರ್ಗ, ಯಾವುದೇ ಮನುಷ್ಯ ಈಶ್ವರಿನನ್ನರಿಯದ ಕಾರಣ ತನ್ನನ್ನೇ ಈಶ್ವರನೆಂದು ತಿಳಿದು ಕುಳಿತಿದ್ದಾರೆ. ಜನನ-ಮರಣದಲ್ಲಿ ಬರುತ್ತಿರುತ್ತಾರೆ. ಅಕಾಲ ಮೃತ್ಯುವೂ ಸಹ ಆಗುತ್ತಿರುತ್ತದೆ ಮತ್ತೆ ತಮ್ಮನ್ನೇ ಈಶ್ವರನೆಂದು ಹೇಳುಕೊಳ್ಳುತ್ತಾರೆ. ದೇವತೆಗಳೆಂದಿಗೂ ಅಕಾಲ ಮೃತ್ಯುವಿನಿಂದ ದೇಹ ಬಿಡುವುದಿಲ್ಲ ಎಂದು ನೀವು ತಿಳಿದುಕೊಂಡಿದ್ದೀರಿ. ಸಮಯ ಪೂರ್ಣವಾದಾಗ ಈ ರೀತಿ ಸಾಕ್ಷಾತ್ಕಾರವಾಗುತ್ತದೆ-ಈಗ ಹಳೆಯ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಪಡೆಯಬೇಕು. ಹೀಗೆ ಇವೆಲ್ಲವು ತುಂಬಾ ತಿಳಿದುಕೊಳ್ಳುವ ಮಾತುಗಳಾಗಿವೆ. ಒಬ್ಬ ತಂದೆಯ ನೆನಪನ್ನೇ ಮಾಡಬೇಕು. ಯಾರ ನಾಮ ರೂಪದಲ್ಲಿ ಮೋಸ ಹೋಗಬಾರದು. ಇಲ್ಲವಾದರೆ ಉರುಳಿ ಬಿಡುತ್ತೀರಿ. ತಂದೆಯು ಅನೇಕ ರೀತಿಯಲ್ಲಿ ತಿಳಿಸಿ ಮಕ್ಕಳನ್ನು ಮೇಲೆತ್ತಬೇಕಾಗುತ್ತದೆ. ಇವರಲ್ಲಿ ಶಿವ ತಂದೆಯ ಆಗಮನವಾಗುತ್ತದೆ, ಇವರೊಂದಿಗೆ ನಾವು ಅಸೂಯ ಪಡಬಾರದು. ಮಾಯೆ ತುಂಬಾ ಬಿರುಗಾಳಿಗಳನ್ನು ತಂದಿಡುತ್ತದೆ, ಮಾಯಾ ರಾವಣ ಅಲುಗಾಡಿಸದಂತೆ ಹನುಮಂತನ ರೂಪದಲ್ಲಿ ಪಕ್ಕಾ ಆಗಬೇಕು. ಆದಿ ದೇವನಿಗೆ ಮಹಾವೀರ ಹನುಮಂತ ಎಂದೂ ಸಹ ಹೇಳುತ್ತಾರೆ. ಈ ರೀತಿ ಹೆಸರನ್ನು ಇಟ್ಟು ಬಿಟ್ಟಿದ್ದಾರೆ. ಮಕ್ಕಳಲ್ಲಿ ಕೆಲವರು ಮಹಾರಥಿಯೂ ಇದ್ದಾರೆ. ಎಲ್ಲಾ ಮಾತುಗಳು ಸಂಗಮಯುಗದ ಪ್ರತ್ಯಕ್ಷ ಪ್ರಮಾಣವಾಗಿದೆ. ಯಾರಿಗೆ ಜ್ಞಾನದ ಮಾಲಿಷ್ ಆಗಿರುವುದಿಲ್ಲ ಅವರು ಮುದಿಡಿರುವಂತೆ ಕಾಣುತ್ತಾರೆ. ಜ್ಞಾನದ ಮಾಲಿಷ್ ನಿಂದ ಲಕ್ಷ್ಮೀನಾರಾಯಣರನ್ನು ನೋಡಿ, ಎಷ್ಟೊಂದು ರಮಣೀಕವಾಗಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮ ಗುರಿ ಉದ್ದೇಶವನ್ನು ಮುಂದಿಟ್ಟುಕೊಂಡು ಶ್ರೇಷ್ಠ ಪದವಿ ಪಡೆಯುವ ಪುರುಷಾರ್ಥ ಮಾಡಬೇಕು. ಚಲನೆ ತುಂಬಾ ರಾಯಲ್ ಆಗಿ ಇಟ್ಟುಕೊಳ್ಳಬೇಕು.

2. ಯಾವುದೇ ದೇಹಧಾರಿಯ ನಾಮ ರೂಪವನ್ನು ನೆನಪು ಮಾಡಬಾರದು. ಒಬ್ಬ ತಂದೆಯ ಅವ್ಯಭಿಚಾರಿ ನೆನಪಲ್ಲಿರುವಂತಹ ಪುರುಷಾರ್ಥವನ್ನು ಮಾಡಬೇಕು.

ವರದಾನ: ತಮ್ಮ ಶಕ್ತಿಶಾಲಿ ಮನಸಾ ಶಕ್ತಿ ಅಥವಾ ಶುಭ ಭಾವನೆಯ ಮೂಲಕ ಬೇಹದ್ದಿನ ಸೇವೆಗಳನ್ನು ಮಾಡುವಂತಹ ವಿಶ್ವ ಪರಿವರ್ತಕ ಭವ.

ವಿಶ್ವ ಪರಿವರ್ತನೆಗಾಗಿ ಅನೇಕರನ್ನು ಯಾರು ತನ್ನ ವೃತ್ತಿಯ ಮೂಲಕ ಶ್ರೇಷ್ಠ ಸಂಕಲ್ಪದ ಮೂಲಕ ಪರಿವರ್ತನೆ ಮಾಡಲು ಸಾಧ್ಯವಿದೆಯೋ ಅಂತಹ ಸೂಕ್ಷ್ಮ ಶಕ್ತಿಶಾಲಿ ಸ್ಥಿತಿಯಿರುವ ಆತ್ಮರು ಬೇಕಾಗಿದೆ. ಬೇಹದ್ದಿನ ಸೇವೆಯು ಶಕ್ತಿಶಾಲಿ ಮನಸ್ಸಾ ಶಕ್ತಿಯ ಮೂಲಕ, ಶುಭಭಾವನೆ ಮತ್ತು ಶುಭ ಕಾಮನೆಯ ಮೂಲಕ ಆಗುವುದು.ಹಾಗಾದರೆ ಕೇವಲ ತಮಗಾಗಿ ಭಾವುಕರಾಗುವುದಲ್ಲ. ಆದರೆ ಅನ್ಯರನ್ನೂ ಶುಭ ಭಾವನೆ, ಶುಭ ಕಾಮನೆಯ ಮೂಲಕ ಪರಿವರ್ತನೆ ಮಾಡಿರಿ. ಬೇಹದ್ದಿನ ಸೇವೆ ಅಥವಾ ವಿಶ್ವದ ಸೇವೆಯನ್ನು ಸಮತೋಲವಿಡುವ ಆತ್ಮರು ಮಾಡಲು ಸಾಧ್ಯ. ಅಂದಮೇಲೆ ಭಾವನೆ ಮತ್ತು ಜ್ಞಾನ, ಸ್ನೇಹ ಹಾಗೂ ಯೋಗದ ಸಮತೋಲನದ ಮೂಲಕ ವಿಶ್ವ ಪರಿವರ್ತಕರಾಗಿರಿ.

ಸ್ಲೋಗನ್: ಬುದ್ಧಿಯೆಂಬ ಕೈ ಬಾಪ್ದಾದಾರವರ ಕೈಯಲ್ಲಿ ಕೊಡುತ್ತೀರೆಂದರೆ, ಪರೀಕ್ಷೆಗಳೆಂಬ ಸಾಗರದಲ್ಲಿ ಅಲುಗಾಡುವುದಿಲ್ಲ.

ಲವಲೀನ ಸ್ಥಿತಿಯ ಅನುಭವ ಮಾಡಿರಿ:

ಯಾವಾಗ ಮನಸ್ಸು ತಂದೆಯವರಾಗಿದೆ ಅಂದಮೇಲೆ ಮನಸ್ಸು ಮತ್ತೆಲ್ಲಿ ಜೋಡಣೆಯಾಗುವುದು! ಪ್ರೀತಿಯನ್ನು ಹೇಗೆ ಮಾಡುವುದೆಂಬ ಪ್ರಶ್ನೆಯು ಉತ್ಪನ್ನವಾಗಲೂ ಸಾಧ್ಯವಿಲ್ಲ ಏಕೆಂದರೆ ಸದಾ ಲವಲೀನರಾಗಿದ್ದಾರೆ, ಪ್ರೀತಿಯ ಸ್ವರೂಪ, ಮಾಸ್ಟರ್ ಪ್ರೀತಿಯ ಸಾಗರರಾಗಿದ್ದೀರಿ ಅಂದಮೇಲೆ ಪ್ರೀತಿ ಮಾಡಬೇಕಾಗುವುದಿಲ್ಲ, ಪ್ರೀತಿಯ ಸ್ವರೂಪರಾಗಿ ಬಿಟ್ಟಿರಿ. ಎಷ್ಟೆಷ್ಟು ಜ್ಞಾನ ಸೂರ್ಯನ ಕಿರಣಗಳು ಅಥವಾ ಪ್ರಕಾಶತೆಯು ಹೆಚ್ಚಾಗುವುದೋ ಅಷ್ಟೇ ಹೆಚ್ಚು ಪ್ರೀತಿಯ ಅಲೆಗಳು ಮೇಲೇಳುತ್ತದೆ.